# ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಉದ್ದೇಶಿತ ಇತರೇ ಯೋಜನೆಗಳ ವಿವರ

- ಧಾರವಾಡ ಶಹರದ ಸಪ್ತಾಪೂರ ಗ್ರಾಮದ ರಿ.ಸ.ನಂ 44/1ಫ ಬಡಾವಣೆಯಲ್ಲಿಯ ಪ್ಲಾಟ ನಂ 67 ರ ಕ್ಷೇತ್ರ 09ಗು-03ಆಣೆ ವಿಸ್ತೀರ್ಣದಲ್ಲಿ ನೆಲಮಹಡಿ ಹಾಗೂ ಮೊದಲನೆ ಮಹಡಿಯನ್ನು ನಿರ್ಮಿಸಲು ಅಂದಾಜು ಪತ್ರಿಕೆಯನ್ನು ತಯಾರಿಸಿದ್ದು ಅಂದಾಜು ಮೊತ್ತ ರೂ 98.50 ಲಕ್ಷಗಳಾಗಿದ್ದು, ಸದರಿ ಯೋಜನೆಗೆ ಮಾನ್ಯ ಜಿಲ್ಲಾಧಿಕಾರಿಗಳಿಂದ ಆಡಳಿತಾತ್ಮಕ ಅನುಮೋದನೆ ಪಡೆದುಕೊಂಡು, ಅಂದಾಜು ಪತ್ರಿಕೆಯನ್ನು ತಾಂತ್ರಿಕ ಪರಿಶೀಲನೆಗಾಗಿ ಲೋಕೋಪಯೋಗಿ ಇಲಾಖೆಗೆ ಸಲ್ಲಿಸಲಾಗಿದೆ.

- ಧಾರವಾಡ ಶಹರದ ದೊಡ್ಡನಾಯಕನಕೊಪ್ಪ ಗ್ರಾಮದ ರಿ.ಸ.ನಂ 8ಅ+8ಕ+9/3ಅ ಬಡಾವಣೆಯಲ್ಲಿಯ ಪ್ಲಾಟ ನಂ 32 ರ ಕ್ಷೇತ್ರ 03ಗು-01ಆಣೆ ರಲ್ಲಿ ಬೇಸಮೆಂಟ್ (ಪಾರ್ಕಿಂಗ್), ನೆಲಮಹಡಿ (ಅಂಗಡಿಗಳು) ಹಾಗೂ ಮೊದಲನೇ ಮಹಡಿ (ವಸತಿ ಮನೆಗಳು) ಗಳುಳ್ಳ ವಾಣಿಜ್ಯ ಮಳಿಗೆಯನ್ನು ನಿರ್ಮಿಸಲು ನುರಿತ ಆರ್ಕಿಟೆಕ್‌ರವರಿಂದ ಅಂದಾಜು ಪತ್ರಿಕೆಯನ್ನು ಪಡೆಯಲಾಗಿದ್ದು ಅಂದಾಜು ಮೊತ್ತ ರೂ 96.00 ಲಕ್ಷಗಳಾಗಿದ್ದು, ಸದರಿ ಯೋಜನೆಗೆ ಮಾನ್ಯ ಜಿಲ್ಲಾಧಿಕಾರಿಯವರಿಂದ ಆಡಳಿತಾತ್ಮಕ ಅನುಮೋದನೆ ಪಡೆದು ಕಾಮಗಾರಿ ಕೈಕೊಳ್ಳಬೇಕಾಗಿರುತ್ತದೆ.